# ಸ್ಫೂರ್ತಿಯ ಕಥೆಗಳು

ಡಿ. ಪಾಂಡುರಂಗ ಭಟ್

ಯುವಜನತೆಗೆ ನೈತಿಕ, ಮೌಲಿಕ ವಿಚಾರಗಳನ್ನು ತಲುಪಿಸುವಲ್ಲಿ ಉತ್ತಮ ಕಥೆಗಳು ಅತ್ಯಂತ ಪರಿಣಾಮಕಾರಿಯಾಗುತ್ತವೆ. ಅಂಥ ಕಥೆಗಳನ್ನಿಲ್ಲಿ ನೀಡಲಾಗಿದೆ. ಲೇಖಕರು ಹಲವು ಸಾಂಸ್ಕೃತಿಕ ಮೌಲ್ಯಗಳುಳ್ಳ ಪೌರಾಣಿಕ ಕಥೆಗಳನ್ನು ಆಂಗ್ಲ, ಕನ್ನಡ ಭಾಷೆಗಳಲ್ಲಿ ರಚಿಸಿ ಪುಸ್ತಕರೂಪದಲ್ಲಿ ಪ್ರಕಟಿಸಿದ್ದಾರೆ.

## ತಾಯಿ ಕಲಿಸಿದ ಪಾಠ

ಮಗುವೊಂದು ಶಾಲೆಯಿಂದ ಅಳುತ್ತಾ ಮನೆಗೆ ಬಂತು. ತಾಯಿ ಏಕೆ ಎಂದು ಕೇಳಿದ್ದಕ್ಕೆ, ''ನನ್ನನ್ನು ಜುಟ್ಟಿನ ಪಂಡಿತ ಎಂದು ಅಪಹಾಸ್ಯ ಮಾಡಿ ನಗುತ್ತಾರೆ'' ಎಂದು ಅಳಹತ್ತಿದ. ಆಗ ಅವನ ಅಮ್ಮ, ''ನಿನ್ನ ಜುಟ್ಟಿನಿಂದ ಅವರಿಗೆ ಯಾವುದೇ ಹಾನಿ ಇಲ್ಲ. ನಿನಗೂ ಯಾವ ಬಾಧೆಯೂ ಇಲ್ಲ. ಯಾರೋ ಮೂರ್ಖರು ಏನೋ ಹೇಳಿದರು ಎಂದು ನಾವು ನಮ್ಮ ಅಸ್ತಿತ್ವ ಕಳೆದುಕೊಳ್ಳಬಾರದು. ಇದು ನಮ್ಮತನ. ಈಗ ಜುಟ್ಟು ತಗೆದೆವು ಎಂದುಕೋ. ಆಗ ನಿನ್ನ ಬಗ್ಗೆ ನಿನಗೇ ಗೌರವವಿರುವುದಿಲ್ಲ. ಏನೋ ಕಳೆದುಕೊಂಡಂತೆ ಹಾಗೂ ನಮ್ಮತನವನ್ನು ಬಿಟ್ಟಹಾಗೆ. ಹೀಗಾಗಿ ಅವರಿವರು ಏನೋ ಅಂದರು ಎನ್ನದೆ, ನೀನು ಅವರನ್ನು ಮರೆತು ನಿನ್ನ ಮನಸ್ಸನ್ನು ಓದಿನ ಕಡೆ ಕೇಂದ್ರೀಕರಿಸು'' ಎಂದಳು. ಹೀಗೆ ತಾಯಿ ಸಮಾಧಾನ ಮಾಡಿದಾಗ, ಹುಡುಗ ನಗುತ್ತಾ ಓದಿನ ಕಡೆ ಮನಸ್ಸು ಹರಿಸಿದ.

ಕೆಲವು ದಿನಗಳ ನಂತರ ''ಅಮ್ಮಾ ಶಾಲೆಯಲ್ಲಿ ಮಕ್ಕಳು ನನ್ನನ್ನು ದಾರ ಹಾಕಿಕೊಂಡವನು ಎಂದು ಗೇಲಿ ಮಾಡುತ್ತಾರೆ. ಜನಿವಾರ ಹಿಡಿದು ತಮಾಷೆ ಮಾಡುತ್ತಾ ಎಳೆದಾಡುವರು'' ಎಂದು ಪುನಃ ಅಳತೊಡಗಿದ. ಆಗ ಅಮ್ಮ, ಜನಿವಾರ ಕಾಣದ ಹಾಗೆ ಅಂಗಿ ಹಾಕಲು ತಿಳಿಸಿ, ಅದೇ ರೀತಿ ಅಂಗಿ ಹೊಲಿಸಿ ಕೊಟ್ಟಳು. ''ಮಗೂ ಈಗ ಇದನ್ನು ಹಾಕಿಕೊಂಡು ಹೋಗು. ಬೇಸರಿಸಬೇಡ. ಈಗ ನಿನ್ನ ಜನಿವಾರ ಕಾಣುವುದಿಲ್ಲ'' ಎಂದು ಸಮಾಧಾನ ಮಾಡಿದಾಗ, ಹುಡುಗ ಸಮಾಧಾನದಿಂದ ಅಮ್ಮ ಕೊಟ್ಟ ಅಂಗಿ ಹಾಕಿಕೊಂಡು ಶಾಲೆಗೆ ಹೋದ.

ಸ್ವಲ್ಪ ದಿನಗಳ ನಂತರ ಆ ಹುಡುಗ ಹೆಚ್ಚಿನ ಅಧ್ಯಯನಕ್ಕೆ ದೂರದ ಸ್ಥಳಕ್ಕೆ ಹೋಗಬೇಕಾಯಿತು. ಅವನು ಅಮ್ಮನಿಗೆ ಪತ್ರ ಬರೆದು, 'ಇಲ್ಲಿ ಕೋಳಿ ಮೊಟ್ಟೆ ತಿನ್ನು ಎನ್ನುತ್ತಿದ್ದಾರೆ, ಅಲ್ಲದೆ ಬೆದರಿಕೆ ಹಾಕುತ್ತಿದ್ದಾರೆ' ಎಂದು ತಿಳಿಸಿದ. ತಾಯಿ ಸಣ್ಣ ಪುಟ್ಟ ಕಲ್ಲು, ಬಂಡೆಗಳು ಬರುತ್ತವೆ ಎಂದು ನದಿ ಹರಿಯುವುದನ್ನು ಬಿಡುವುದೆ? ಅವರು ಎಷ್ಟೇ ತೊಂದರೆ ಕೊಟ್ಟರೂ ನೀನು ಕದಲದಿರು. ಕಾಗೆಗಳ ಹಾಗೆ ಕೂಗುವವರು ಕೂಗಲಿ. ನೀನು ಮಾತ್ರ ಮಹಾನ್ ವ್ಯಕ್ತಿಯಾಗಬೇಕು. ನಿನ್ನ ಅಧ್ಯಯನವನ್ನು ತಪಸ್ಸು ಎಂದುಕೊಂಡು ಮುಂದುವರಿಸುತ್ತಿರು'' ಎಂದು ಪತ್ರ ಬರೆದಳು. ಹುಡುಗ ತಾಯಿ ಹೇಳಿದ ಹಾಗೆ ಮಾಡಿದ.



ಅಮ್ಮನನ್ನೇ ಸದಾ ನೆನೆಯುತ್ತಾ ಶ್ರದ್ಧಾಪೂರ್ವಕ ಓದಿ ನಂತರ ಕೇಂಬ್ರಿಜ್‌ಗೆ ಹೋದನು. ವಿಶ್ವವೇ ಬೆರಗಾಗುವ ಹಾಗೆ ಭಾರತದ ಕೀರ್ತಿಪತಾಕೆಯನ್ನು ಎತ್ತಿಹಿಡಿದನು. ತಾಯಿಯ ಮೌಲ್ಯಗಳನ್ನು ಸದಾ ನೆನಪಿನಲ್ಲಿಟ್ಟುಕೊಂಡು, ಜೀವನದ ಉದ್ದಕ್ಕೂ ಅವರನ್ನು ನೆನೆಯುತ್ತಾ ಮುಂದೆ ಚೆನ್ನೈ ಐ.ಐ.ಟಿ. ಯಲ್ಲಿ ಉಪಕುಲಪತಿಯಾದಾಗಲೂ ತಮ್ಮ ಜುಟ್ಟು ತಗೆಯಲೇ ಇಲ್ಲ. ಸದಾ ಭಾರತೀಯರಂತೆ ಪೇಟ ಧರಿಸಿಯೇ ತಮ್ಮ ಕೆಲಸ ಮಾಡುತ್ತಿದ್ದರು. ಭಾರತೀಯ ಉಡುಪು ಹಾಗೂ ನಮ್ಮತನ ವನ್ನು ನಾವು ಬಿಡಬಾರದಲ್ಲವೆ? ನಮ್ಮಲ್ಲಿ ಆತ್ಮವಿಶ್ವಾಸವಿರುವುದು ಮುಖ್ಯ. ಭಾರತೀಯತೆ ನಮ್ಮ ಗುರುತು.

ಈ ಮಹಾತ್ಮ ಯಾರು ಎಂದು ನಿಮಗೆ ತಿಳಿದಿದೆಯೆ ?

ಇವರೇ ಸರ್ ಸಿ.ವಿ. ರಾಮನ್.

ಇವರು ಮಹಾನುಭಾವರಲ್ಲವೆ?


## ಹಲವೆಡೆ ಬಾವಿ ತೋಡುವುದು

ಶಾಸ್ತ್ರಿ ಹಳ್ಳಿಯಲ್ಲಿ ಮನೆ ಕಟ್ಟಿಕೊಂಡು ಅದು ಇದು ಮಾಡಿಕೊಂಡು ಯಥಾರೀತಿ ಇರುತ್ತಿದ್ದ. ಶಾಸ್ತ್ರಿ ಮಹಾದೇವನ ಭಕ್ತ. ದಿನನಿತ್ಯ ಬೇರೆ ಯಾವುದಕ್ಕೂ ಹಣ ಇಲ್ಲದಿದ್ದರೂ ದೇವರ ಪೂಜೆಗೆ ಸ್ವಲ್ಪ ಹಣ ತಗೆದಿಟ್ಟುಕೊಂಡು, ತಾನೇ ಹೂವು ಮಾರುವವಳ ಹತ್ತಿರ ಹೋಗಿ ಕಡಿಮೆ ಬೆಲೆಗೆ ಹೂ ತರುತ್ತಿದ್ದ. ದಿನವೂ ಒಂದೇ ಕಡೆ ಹೋಗುತ್ತಿದ್ದ ಕಾರಣ ಹೂವಿನ ವ್ಯಾಪಾರಿಗಳು, ಬ್ರಾಹ್ಮಣ ಸ್ವಾಮಿಗಳ ಪೂಜೆಗೆ ಹೂವು; ನಮಗೂ ಪುಣ್ಯ ಬರಲಿ

ಎಂದು ಮಾರಲು ಸಾಧ್ಯವಾಗದ, ಬೇಡದ ಹೂವು ತೆಗೆದಿಟ್ಟು ಕೊಂಡು, ಪುಕ್ಕಟೆ ಕೊಡುವ ಪರಿಪಾಠ ಮಾಡಿಕೊಂಡಿದ್ದರು. ಬುಟ್ಟಿಗಟ್ಟಲೆ ಕೆಟ್ಟ ಹೂವಿನಿಂದಲೇ ಶಾಸ್ತ್ರಿಗಳ ದೇವರ ಪೂಜೆ ಗಂಟೆಗಟ್ಟಲೆ ನಡೆಯುತ್ತಿತ್ತು.

ಯಾವಾಗ ಪೂಜೆಗೆ ಹೂವುಗಳು ಬುಟ್ಟಿಗಟ್ಟಲೆ ಪುಕ್ಕಟೆ ಸಿಗತೊಡಗಿದವೋ ಅಂಥ ಕೆಲಸವೇನೂ ಇರದ ಶಾಸ್ತ್ರಿ , ಶಿವ, ಸಾಯಿಬಾಬ, ಲಕ್ಷ್ಮಿ, ವಿಷ್ಣು, ಕಾಳಿ, ವೆಂಕಟೇಶ, ಅನ್ನಪೂರ್ಣೇಶ್ವರಿ, ಭಂಭಂದೇವಿ, ಹೀಗೆ ಹಲವು ದೇವರುಗಳಿಗೂ ಪೂಜೆ ನಡೆಸುವುದನ್ನು ಅಭ್ಯಾಸ ಮಾಡಿಕೊಂಡ. ಅವನ ತೃಪ್ತಿ ಎಂದು ಎಲ್ಲರೂ ಸುಮ್ಮನೆ ಅವನು ಮಾಡುವುದನ್ನು ನೋಡುತ್ತಿದ್ದರು.

ಒಂದು ದಿನ ಅವನ ಮನೆಯ ಹತ್ತಿರ ಯಾರೋ ಪುಣ್ಯಾತ್ಮರು ಬಾವಿಯನ್ನು ತೋಡಿಸಲು ಕೂಲಿಕಾರರನ್ನು ನಿಯಮಿಸಿದರು. ಕೂಲಿಯವರಿಗೆ ಹತ್ತಿರದ ಮನೆ ಶಾಸ್ತ್ರಿಯದಾಗಿತ್ತು. ನೆರಳಿನಲ್ಲಿ ಕುಳಿತು ಊಟ ಮಾಡುವುದಕ್ಕಾಗಲಿ, ನೀರಿಗಾಗಲಿ ಇವರ ಬಳಿಗೆ ಬಂದು ಕೇಳುತ್ತಿದ್ದರು.



ಒಂದು ದಿನ ಬಿಸಿಲು ಅತ್ಯಂತ ಪ್ರಖರವಾಗಿದ್ದು ಕೂಲಿಯವನ ಹತ್ತಿರ ಕುಡಿಯಲು ನೀರು ಮುಗಿದು ಹೋಗಿ, ಶಾಸ್ತ್ರಿಯ ಮನೆಗೆ ನೀರಿಗಾಗಿ ಬಂದ. ''ಸ್ವಾಮಿ, ಸ್ವಾಮಿ ನೀರು ಕೊಡಿ'' ಎಂದು ಕೂಗಿದ.

ಶಾಸ್ತ್ರಿ ಆಗ ಪೂಜೆಗೆ ಕುಳಿತಿದ್ದ. ಕೂಲಿಯವನು ಕರೆದಿದ್ದು ಕೇಳಿಸಿತು. ''ತಡಿಯೋ ಈಗ ನಾನು ವಿಷ್ಣು ಪೂಜೆ ಮಾಡುತ್ತಿರುವೆ'' ಎಂದ. ಪುನಃ ಕೂಲಿಯವನು ಕರೆದಾಗ, ''ತಡಿಯೋ ನಾನು ಶಿವನ ಪೂಜೆ ಮಾಡುತ್ತಿರುವೆ'' ಎಂದ. ಪ್ರತಿಸಲ ನೀರು ಕೇಳಿದಾಗಲೆಲ್ಲಾ ನಾನು ಇವರ ಪೂಜೆ, ಇವರ ಪೂಜೆ ಮಾಡುತ್ತಿದ್ದೇನೆ ಎನ್ನುತ್ತಲೇ ಬಂದ. ಕೂಲಿಯವನ ಕೈಯಲ್ಲಿ ಹಾರೆ ಇತ್ತು . ಅಸಮಾಧಾನದಿಂದ ಇಲ್ಲೊಂದು, ಅಲ್ಲೊಂದು ಕುಣಿ ತೆಗೆಯುತ್ತಾ ಬಂದ. ಹಲವಾರು ಕುಣಿಗಳಾದವು.

ಎಷ್ಟೋ ಹೊತ್ತಿನ ನಂತರ ಬಂದ ಶಾಸ್ತ್ರಿ ನೀರು ಕೊಡುತ್ತಾ ಕುಣಿಗಳನ್ನು ನೋಡಿ, ಅಪಹಾಸ್ಯಮಾಡುತ್ತಾ ''ಅಲ್ಲಿ ಇಲ್ಲಿ ತೋಡುವುದರ ಬದಲು ಒಂದೇ ಕಡೆ ತೋಡಿದ್ದರೆ ಇಷ್ಟು ಹೊತ್ತಿಗೆ ಬಾವಿಯಾಗಿ ನೀರು ಸಿಗುತ್ತಿತ್ತು'' ಎಂದು ಗೇಲಿ ಮಾಡಿ ನಕ್ಕ. ಅದಕ್ಕೆ ಕೂಲಿಯವನು, ''ಸ್ವಾಮಿ ನೀವು ಇಷ್ಟೊಂದು ದೇವರ ಪೂಜೆ ಮಾಡುವ ಬದಲಿಗೆ ಒಬ್ಬನೇ ದೇವನನ್ನು ಪೂಜೆ ಮಾಡಿದ್ದರೆ ನಿಮಗೆ ಮೋಕ್ಷ ಸಿಕ್ಕಿರೋದು'' ಎಂದು ಹೇಳಿ ನೀರು ತಗೆದುಕೊಂಡು ಹೊರಟ. ಪೆಚ್ಚಾದ ಶಾಸ್ತ್ರಿ.

ಯಾವುದು ಸರಿ ಎನ್ನುವಿರಿ? ಯಾರನ್ನು ಮಹಾನುಭಾವ ಎನ್ನುವಿರಿ?

## ದೇವರಿಗೆ ಜೋಳದ ಖಿಚಡಿ

ಪುರಿ ಜಗನ್ನಾಥದಲ್ಲಿ ಕರ್ಮಾಬಾಯಿ ಎನ್ನುವ ಭಕ್ತಳು ತನ್ನ ಹೊಲದಲ್ಲಿ ಬೆಳೆದ ಜೋಳದ ಆಧಾರದಲ್ಲಿಯೇ ಜೀವನ ನಡೆಸುತ್ತಿದ್ದಳು. ಕರ್ಮಾಬಾಯಿಗೆ ಜಗನ್ನಾಥ ಆರಾಧ್ಯ ದೈವ. ಕೆಲಸ ಮಾಡುವಾಗಲೂ, ನಿದ್ದೆ ಮಾಡುವಾಗಲೂ ಸದಾ ಜಗನ್ನಾಥನ ಜಪ ಮಾಡುತ್ತಲೇ ಇದ್ದುಬಿಡುತ್ತಿದ್ದಳು. ಕರ್ಮಾಬಾಯಿಯ ಎದ್ದ ಕೂಡಲೇ ಜೋಳದ ಖಿಚಡಿ ಮಾಡಿ ಅದನ್ನು ಜಗನ್ನಾಥನಿಗೆ ನೈವೇದ್ಯ ಎಂದು ಇಟ್ಟು, ''ಜಗನ್ನಾಥ! ಸ್ವೀಕರಿಸು'' ಎಂದು ಭಕ್ತಿಯಿಂದ ನಮಸ್ಕರಿಸಿ ತನ್ನ ಬೆಳಗಿನ ಕಾರ್ಯಗಳಿಗೆ ತೆರಳುವುದು ವಾಡಿಕೆಯಾಗಿತ್ತು. ಕರ್ಮಾಬಾಯಿಯ ಶ್ರದ್ಧೆ, ಭಕ್ತಿಗಳನ್ನು ಕಂಡ ಭಗವಂತ ನೈವೇದ್ಯ ಸ್ವೀಕರಿಸುತ್ತಿದ್ದ. ಹೀಗೆ ಅನೇಕ ವರ್ಷಗಳು ನಡೆಯಿತು. ಯಾರಿಗೂ ಕರ್ಮಾಬಾಯಿಯ ಭಕ್ತಿ , ಸೇವೆ ತಿಳಿಯುತ್ತಲಿಲ್ಲ.

ಹೀಗೆ ನಡೆಯುತ್ತಿರುವಾಗ ಭಗವಂತನೇ ಸುಂದರ ಬಾಲಕನ ರೂಪದಲ್ಲಿ ಇವಳ ಮನೆಗೆ ಬಂದು, ''ಅಮ್ಮ ನನಗೆ ತುಂಬಾ ಹಸಿವಾಗಿದೆ. ಏನಾದರೂ ತಿನ್ನಲು ಕೊಡು'' ಎಂದ. ಕರ್ಮಾಬಾಯಿಗೆ ಅತೀವ ಸಂತಸವುಂಟಾಯಿತು. ಭಗವಂತನೇ ಮನೆಗೆ ಬಂದ ಎಂದುಕೊಂಡು, ಬಾಲಕನನ್ನು ಒಳಗೆ ಕರೆದು ಕೂಡಿಸಿ, ತುಂಬು ಹೃದಯದಿಂದ, ಆಗ ತಾನೆ ಭಗವಂತನಿಗೆ ನೈವೇದ್ಯ ಮಾಡಿ ಉಳಿದಿದ್ದನ್ನು ತಂದು ಬಾಲಕನಿಗೆ ಪ್ರೇಮದಿಂದ ಕೊಟ್ಟು ಸಂತಸಪಟ್ಟುಕೊಂಡಳು. ಬಾಲಕ ಜಗನ್ನಾಥನು, ''ಅಮ್ಮ, ಇದು ತುಂಬಾ ಚೆನ್ನಾಗಿದೆ, ನಾನು ದಿನವೂ ಬಂದರೆ ಕೊಡುವೆಯಾ?'' ಎಂದು ಕೇಳಿದ. ಬಾಲಕನನ್ನು ಮುದ್ದು ಮಾಡುತ್ತಾ ''ದಿನವೂ ಬಾ ಕೊಡುವೆ'' ಎಂದಳು ಕರ್ಮಾಬಾಯಿ. ಬಾಲಕನು ಹೊರಟ. ಹೀಗೆಯೇ ಅನೇಕ ದಿನಗಳು ಕಳೆದವು.

ಒಂದು ದಿನ ವಯಸ್ಸಾದ ಸಾಧು ಇವರ ಮನೆಯಲ್ಲಿ ಪ್ರಸಾದಕ್ಕೆ ನಿಂತ. ಕರ್ಮಾಬಾಯಿ ಮಾಡುತ್ತಿರುವ ಎಲ್ಲಾ ಕಾರ್ಯಗಳನ್ನು ಗಮನಿಸಿ, ಸಂತಸದಿಂದ, ''ಕರ್ಮಾಬಾಯಿ ನೀನು ಸ್ನಾನ, ನಿತ್ಯಕರ್ಮ ಇವುಗಳನ್ನು ಮಾಡದೆ ಭಗವಂತನಿಗೆ



ಅರ್ಪಣೆ ಮಾಡುವುದು ಸರಿಯಲ್ಲ. ನೀನು ಶುಭ್ರಳಾಗಿ ವಿಧಿ ವಿಧಾನದಲ್ಲಿ ಪೂಜಿಸಿ, ನೈವೇದ್ಯವನ್ನು ಭಗವಂತನಿಗೆ ಅರ್ಪಿಸಬೇಕು'' ಎಂದು ಎಲ್ಲಾ ಹೇಳಿಕೊಟ್ಟು ಹೊರಟುಹೋದ. ಈ ವಿಷಯ ಕರ್ಮಾಬಾಯಿಗೂ ಸರಿ ಎನ್ನಿಸಿ, ಮಾರನೇ ದಿನದಿಂದ ಹಾಗೆಯೇ ಮಾಡುವುದಾಗಿ ನಿರ್ಧರಿಸಿದಳು. ತನ್ನ ನಿತ್ಯ ಕರ್ಮ ಮುಗಿಸಿ, ಸ್ನಾನ ಪೂಜೆ ಮಾಡಿದ ನಂತರವೇ ಜಗನ್ನಾಥನಿಗೆ ಖಿಚಡಿ ನೇವೇದ್ಯ ಕೊಡುವ ಪದ್ಧತಿ ಮಾಡಿಕೊಂಡಳು. ಭಗವಂತ ಹಾಗೆಯೇ ಸ್ವೀಕರಿಸುತ್ತಿದ್ದ. ಇದೆಲ್ಲ ಮಾಡಲು ಸಮಯ ಬಹಳ ಹಿಡಿಯುತ್ತು. ಇದರಿಂದ ತೊಂದರೆಯಾದದ್ದು ಬಾಲರೂಪದಲ್ಲಿ ಬರುತ್ತಿದ್ದ ಜಗನ್ನಾಥನಿಗೆ. ಖಿಚಡಿಗಾಗಿ ಕಾಯಬೇಕಿತ್ತು. ಅವನಿಗೆ ಬೇಗ ಖಿಚಡಿ ಸ್ವೀಕರಿಸಿ ಹೋಗಲು ಸಾಧ್ಯವಾಗುತ್ತಿರಲಿಲ್ಲ.

ಎಷ್ಟೋ ಸಲ, ''ಅಮ್ಮಾ, ಬೇಗ ಕೊಡು'' ಎಂದು ಬಾಲಕ ಜಗನ್ನಾಥ ಕಾಡುತ್ತಾ ಕೇಳಿದಾಗಲೂ, ಕರ್ಮಾಬಾಯಿ ಮುದ್ದು ಮಾಡುತ್ತ ನಗುನಗುತ್ತಾ ''ತುಂಬಾ ಹಸಿವೆಯಾಗಿದೆಯೆ? ಇರು, ಜಗನ್ನಾಥನಿಗೆ ಕೊಟ್ಟ ನಂತರವೇ ನಿನಗೆ ಕೊಡುತ್ತೇನೆ'' ಎಂದು ಬಾಲಕನಿಗೆ ಪ್ರೇಮದಿಂದ ಖಿಚಡಿ ಕೊಡುತ್ತಿದ್ದಳು. ಬಾಲಕ ಜಗನ್ನಾಥ ಬೇಗಬೇಗನೆ ತಿಂದು ಬಾಯಿ ಕೈ ತೊಳೆಯದೆ ಓಡಿಹೋಗುತ್ತಿದ್ದ. ಕರ್ಮಾಬಾಯಿ ಬಾಲಕನ ಆಟವನ್ನು ಕಂಡು ಸಂತಸದಿಂದ ನಗುತ್ತಿದ್ದಳು. ಕೆಲವು ದಿನಗಳು ಹೀಗೆ ಕಳೆದವು.

ಇತ್ತ ಜಗನ್ನಾಥ ಮಂದಿರದಲ್ಲಿ ಜಗನ್ನಾಥನ ಬಾಯಿಗೆ ಖಿಚಡಿ ಹತ್ತಿರುವುದನ್ನು ಅಲ್ಲಿ ಪೂಜೆ ಮಾಡುತ್ತಿದ್ದ ಪುರೋಹಿತ ಗಮನಿಸಿದ. ಕೆಲವು ದಿನ ಅಷ್ಟಾಗಿ ಯೊಚಿಸದೆ ಬಾಯಿ ಒರೆಸಿ, ತನ್ನ ಪೂಜೆ ಮಾಡುತ್ತಿದ್ದ. ಇದು ಪುನರಾವರ್ತನೆಯಾಗುತ್ತಿರುವಾಗ ಪುರೋಹಿತ, ''ನಾವು ೫೬ ಬಗೆಯ ನೈವೇದ್ಯವನ್ನು ಕೊಡುತ್ತಿರುವೆವು. ಅದರಲ್ಲಿ ಜೋಳದ ಖಿಚಡಿ ಇಲ್ಲವಲ್ಲ? ಹಾಗಾದರೆ ಹೇಗೆ ಜಗನ್ನಾಥ ಠಾಕೂರ್‌ಗೆ ಜೋಳದ ಖಿಚಡಿ ಹೇಗೆ ಹತ್ತಿರುತ್ತದೆ?'' ಪುರೋಹಿತರಿಗೆ ತಿಳಿಯದಾಯಿತು. ದಿನವೂ ಹೀಗೆಯೇ ಆಗುತ್ತಿತ್ತು. ಹಲವು ವರ್ಷಗಳು ಹೀಗೆ ಕಳೆದವು. ಪುರೋಹಿತರಿಗೆ ಠಾಕೂರ್ ಭಗವಾನ್ ಬಾಯಿಗೆ ಖಿಚಡಿ ಹೇಗೆ ಹತ್ತಿರುತ್ತದೆ ಎನ್ನುವ ವಿಚಾರ ತಿಳಿಯದಾಗಿತ್ತು.

ಕರ್ಮಾಬಾಯಿಯ ಆಯಸ್ಸು ಪೂರ್ಣವಾಗಿ ಒಂದು ದಿನ ಆಕೆ ಭಗವಂತನ ಪಾದ ಸೇರಿಕೊಂಡಳು. ಕರ್ಮಾಬಾಯಿ ತೀರಿಕೊಂಡ ದಿನ ಜಗನ್ನಾಥ ಠಾಕೂರ ಮೂರ್ತಿಯ ಕಣ್ಣುಗಳಲ್ಲಿ ನೀರು ಬರತೊಡಗಿತು. ಎಷ್ಟು ಒರೆಸಿದರೂ ನಿಲ್ಲದ ಕಣ್ಣೀರನ್ನು ಕಂಡು ಜನರು, ಪೂಜಾರಿಗಳು ಆಶ್ಚರ್ಯದಿಂದ ಆಗ ಇದ್ದ ರಾಜನಿಗೆ ವಿಷಯ ತಿಳಿಸಿದರು. ರಾಜನೂ ನೋಡಿ ಆಶ್ಚರ್ಯಪಟ್ಟು ಅದನ್ನೇ ನೆನೆಯುತ್ತಾ ಮಲಗಿಕೊಂಡ.

ಆ ದಿನ ರಾಜನಿಗೆ ಸ್ವಪ್ನವಾಗಿ, ಭಗವಂತನು ಕರ್ಮಾಬಾಯಿ ತೀರಿಕೊಂಡ ವಿಷಯ ತಿಳಿಸಿ, ತಾನು ಖಿಚಡಿ ಅವಳ ಮನೆಯಲ್ಲಿ ತಿನ್ನುತ್ತಿದ್ದೆ; ತನಗೆ ಅವಳ ಮನೆಯಲ್ಲಿ ತಡವಾಗಿ ಖಿಚಡಿ ಸಿಗುತ್ತಿದ್ದು, ಮಂದಿರದ ಬಾಗಿಲು ತೆಗೆದೊಡನೆ ಬರಬೇಕು ಎನ್ನುವ ಆತುರದಲ್ಲಿ ಬಾಯಿ ತೊಳೆಯದೇ ಬರುತ್ತಿದ್ದೆನಾದ್ದರಿಂದ ನನ್ನ ಬಾಯಿಗೆ ಖಿಚಡಿ ಹತ್ತಿರುತ್ತಿತ್ತು. ಕೆಲ ದಿನಗಳ ಹಿಂದೆ ಕರ್ಮಾಬಾಯಿ ನನ್ನ ಪಾದ ಸೇರಿಕೊಂಡಳು. ಖಿಚಡಿ ನನ್ನ ಅತ್ಯಂತ ಪ್ರಿಯ ಆಹಾರವಾಗಿತ್ತು ಎಂದು ಜಗನ್ನಾಥ ತಿಳಿಸಿದ. ರಾಜನು ಮಾರನೆಯ ದಿನ ಎಲ್ಲರಿಗೂ ತನ್ನ ಕನಸಿನ ವಿಷಯ ತಿಳಿಸಿದ. ಪೂಜೆ ಮಾಡುತ್ತಿದ್ದ ಪುರೋಹಿತರಿಗೆ ಈಗ ಖಿಚಡಿ ಠಾಕೂರರ ಬಾಯಿಗೆ ಹೇಗೆ ಹತ್ತಿರುತ್ತಿತ್ತು ಎನ್ನುವ ವಿಷಯ ತಿಳಿದು, ''ಭಗವಂತ ನಿನ್ನ ಲೀಲೆ ಅಮೋಘ'' ಎಂದು ನಮಸ್ಕರಿಸಿದರು.

ರಾಜನ ಅಣತಿಯಂತೆ ಅಂದಿನಿಂದ ಕರ್ಮಾಬಾಯಿಯ ಹೆಸರಿನಲ್ಲಿ ಜೋಳದ ಖಿಚಡಿ ಮಾಡಿ, ಮೊದಲು ಅದನ್ನು ನೈವೇದ್ಯವಾಗಿ ಸ್ವೀಕರಿಸಲು ಕೊಟ್ಟು, ಅನಂತರ ೫೬ ಬಗೆಯ ಪ್ರಸಾದಗಳನ್ನು ಜಗನ್ನಾಥ ಭಗವಾನ್‌ಗೆ ಅರ್ಪಿಸಲು ಪ್ರಾರಂಭ ಮಾಡಿದರಂತೆ. ಯಾವಾಗ ಕರ್ಮಾಬಾಯಿಯ ಹೆಸರಿನಿಂದ ನೈವೇದ್ಯ ಬರಲು ಪ್ರಾರಂಭವಾಯಿತೋ ಅಂದಿನಿಂದ ಭಗವಂತನ ಕಣ್ಣಲ್ಲಿ ನೀರು ಬರುವುದು ನಿಂತಿತಂತೆ.

ಈಗಲೂ ಕರ್ಮಾಬಾಯಿಯ ಖಿಚಡಿ ನೈವೇದ್ಯವನ್ನು ಮೊದಲು ಭಗವಂತನಿಗೆ ಅರ್ಪಿಸಲಾಗುತ್ತದೆಯಂತೆ.

ಕರ್ಮಾಬಾಯಿ ಮಹಾನ್ ಭಕ್ತಳಲ್ಲವೆ? ಅವಳು ಹಾಕಿದ ದಾರಿಯಲ್ಲಿ ನಾವೂ ನಡೆಯಬೇಕಲ್ಲವೆ ? ❋